ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5501
ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ)
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಆಡಳಿತ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಆಡಳಿತ ಸುಧಾರಣೆ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಕರ್ನಾಟಕ ಸರ್ಕಾರ (ವ್ಯವಹಾರಿಕ ಹಂಚಿಕೆ) ನಿಯಮಗಳು 1977 ರೀತ್ಯ ಆಡಳಿತ ಸುಧಾರಣೆ ವಿಷಯಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆ.ಸು) ಇಲಾಖೆಗೆ ಹಂಚಿಕೆಯಾಗಿದ್ದು, ಈ ಇಲಾಖೆಯು ಮಾನ್ಯ ಮುಖ್ಯಮಂತ್ರಿಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. 2. ಸಿ.ಆ.ಸು.ಇಲಾಖೆಯ ಆಡಳಿತ ಸುಧಾರಣೆ ವಿಭಾಗಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಸಿ ಆಸುಇ 18 ಸಾಸೀವಿ 97 ದಿನಾಂಕ: 20.6.1997ರಲ್ಲಿ ವಿಶೇಷ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸಲಾಗಿದೆ. 3. ಆಡಳಿತದ ಎಲ್ಲಾ ಹಂತಗಳಲ್ಲಿ ದಕ್ಷತೆಯನ್ನು ಹೆಚ್ಚಿಸುವ ಮತ್ತು ಪಾರದರ್ಶಕತೆಯನ್ನು ಉಂಟು ಮಾಡುವ ಸಲುವಾಗಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 19 ಎಎಂಸಿ 2000, ದಿನಾಂಕ: 3.10.2000 ದಲ್ಲಿ ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆಡಳಿತ ಸುಧಾರಣೆ ಆಯೋಗ ರಚಿಸಿದ್ದು, ಸದರಿ ಆಯೋಗ

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
		ದಿನಾಂಕ: 20.1.2001ರಂದು ಮಧ್ಯಂತರ ವರದಿಯನ್ನು ಹಾಗು 27.12.2001ರಂದು ಅಂತಿಮ ವರದಿಯನ್ನು ನೀಡಿದ್ದು, ವರದಿಯನ್ವಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳ ಲಾಗಿದೆ. 4. ಸರ್ಕಾರದ ಆಡಳಿತ ಯಂತ್ರವು ಸುಗಮ ವಾಗಿ ಕಾರ್ಯನಿರ್ವಹಿಸಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಹಾಗೂ ಅದರ ಅಧೀನದಲ್ಲಿ 18 ಜಿಲ್ಲಾ ತರಬೇತಿ ಸಂಸ್ಥೆಗಳು ಮತ್ತು ಸಚಿವಾಲಯ ತರಬೇತಿ ಸಂಸ್ಥೆಯಲ್ಲಿ ಸೇವಾ ವಿಷಯ, ಪಾರದರ್ಶಕ ಅಧಿ ನಿಯಮ, ಮಾಹಿತಿ ಪಡೆಯುವ ಹಕ್ಕು ಅಧಿನಿಯಮ, ಹಣಕಾಸು ನಿರ್ವಹಣೆ ಮತ್ತು ಆಯವ್ಯಯ ವಿಷಯಗಳು, ವಿಧಾನ ಮಂಡಲದ ವಿಷಯಗಳು, ವರ್ತನಾ ವೈಖರಿ ವಿಜ್ಞಾನ, ಯೋಜನಾ ವಿಷಯ ಗಳು, ಹೊಸ ಕಾರ್ಯವಿಧಾನಗಳು ಹಾಗೂ ಮತ್ತಿತರ ಸೇವಾ ವಿಷಯಗಳ ಬಗ್ಗೆ ಸಚಿವಾಲಯ ಹಾಗೂ ಕ್ಷೇತ್ರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ದಕ್ಷತೆ ಹೆಚ್ಚಿಸುವ ಸಲುವಾಗಿ ತರಬೇತಿ ನೀಡಲಾಗುತ್ತಿದೆ. 5. ರಾಜ್ಯದ ನಾಗರಿಕರಿಗೆ ಮಾಹಿತಿಯನ್ನು ಪಡೆಯುವ ಅವಕಾಶದ ಹಕ್ಕಿಗಾಗಿ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ ಅನ್ನು ಕಾರ್ಯಗತಗೊಳಿಸಲಾಗುವುದು. 6. 2003ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಪ್ರತ್ಯೇಕವಾಗಿ ಆಡಳಿತ ಸಚಿವಾಲಯವನ್ನು ರಚಿಸಲಾಗಿದೆ. ಸಾರ್ವ

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
		ಜನಿಕರ ಅನುಕೂಲಕ್ಕಾಗಿ ಸರ್ಕಾರದ ಕಾರ್ಯವಿಧಾನವನ್ನು ಗಣಕೀಕರಣಗೊಳಿಸಿ ಸರ್ಕಾರದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದು ಈ ಸಚಿವಾಲಯದ ಉದ್ದೇಶವಾಗಿದ್ದು, ಇದು ಸಿ.ಆ.ಸು.ಇ (ಅ.ಸು) ಇಲಾಖೆಯ ಒಂದು ಭಾಗವಾಗಿದೆ. ಸಚಿವಾಲಯದಲ್ಲಿ ಪತ್ರ ಹಾಗೂ ಕಡತಗಳ ನಿರ್ವಹಣೆ ಪದ್ಧತಿಯನ್ನು LAN ಮುಖಾಂತರ ಮಾಡಲಾಗುತ್ತಿದೆ. ಸಚಿವಾಲಯದ ಅಧಿಕಾರಿ/ನೌಕರರುಗಳ ಹಾಜರಾತಿಯನ್ನು ಸಹ ಗಣಕೀಕರಣಗೊಳಿಸಲಾಗಿದೆ. 7. ಗಣಕೀಕರಣದದಿಸೆಯಲ್ಲಿ ಸಿಬ್ಬಂದಿ ವರ್ಗದವರನ್ನು ಬಲಪಡಿಸಲು ಗಣಕೀಕರಣ ತರಬೇತಿ ಕೇಂದ್ರವನ್ನು ಇ-ಆಡಳಿತ ಸಚಿವಾಲಯದಲ್ಲಿ ತೆರೆಯಲಾಗಿದ್ದು, ಕಾರ್ಯನಿರತವಾಗಿದೆ.
ಆ.	ಆಡಳಿತ ಸುಧಾರಣೆ ಬಗ್ಗೆ ಸರ್ಕಾರಕ್ಕೆ ಯಾರು ಯಾರು ವರದಿಯನ್ನು ಸಲ್ಲಿಸಿದ್ದಾರೆ? (ವಿವರ ನೀಡುವುದು)	ಆಡಳಿತ ಸುಧಾರಣೆ ಆಯೋಗವು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ.

ಶ್ರೀ ಎಸ್.ಆರ್.ಮೋರೆ : ಇವತ್ತು ಮೂಲಭೂತ ಸೌಕರ್ಯಗಳನ್ನು ಕೊಡುತ್ತಿದ್ದೇನೆ. ಅದಲ್ಲದೆ, ಇನ್ನೂ ಹೆಚ್ಚಿನ ಬೇಡಿಕೆಯನ್ನು ತಾವು ಹೇಳುತ್ತಿದ್ದೀರಿ, ಅದನ್ನು ಪರಿಶೀಲನೆ ಮಾಡುತ್ತೇನೆ.

ದಿನಾಂಕ:19–7–2005ರಂದು ವಿಧಾನಸಭೆಯಲ್ಲಿ ಉತ್ತರಕ್ಕಾಗಿ ನಿಗದಿಪಡಿಸಿರುವ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರ ಚುಕ್ಕೆ ಗುರ್ತಿನ ಪ್ರಶ್ನೆ ಸಂ.5501ಕ್ಕೆ ಉತ್ತರದ ಸಂಬಂಧದಲ್ಲಿ ಪೂರಕ ಟಿಪ್ಪಣಿ.

1. ಕರ್ನಾಟಕ ಸರ್ಕಾರ (ವ್ಯವಹಾರಿಕ ಹಂಚಿಕೆ) ನಿಯಮಗಳು 1977ರ ರೀತ್ಯ ಆಡಳಿತ ಸುಧಾರಣೆ ವಿಷಯಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆ.ಸು) ಇಲಾಖೆಗೆ ಹಂಚಿಕೆಯಾಗಿದ್ದು, ಈ ಇಲಾಖೆಯು ಮಾನ್ಯ ಮುಖ್ಯಮಂತ್ರಿಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. ಸಿಆಸು ಇಲಾಖೆಯ, ಆಡಳಿತ ಸುಧಾರಣೆ ವಿಭಾಗಕ್ಕೆ ಆದೇಶ ಸಂಖ್ಯೆ: ಸಿಆಸುಇ 18 ಸಸಿವಿ 97, ದಿನಾಂಕ: 20.6.97ರಲ್ಲಿ ವಿಶೇಷ ಕಾರ್ಯದರ್ಶಿ ಹುದ್ದೆಯನ್ನು ಹಾಗೂ ಅದಕ್ಕೆ ಹೊಂದಿಕೊಂಡಂತೆ ಅಧೀನ ಹುದ್ದೆಗಳನ್ನು ಸೃಜಿಸಲಾಗಿದೆ.

2. ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚಿಸಿದ ಆಡಳಿತ ಸುಧಾರಣಾ ಆಯೋಗವು ಸರ್ಕಾರಕ್ಕೆ ಎರಡು ವರದಿಗಳನ್ನು ನೀಡಿದ್ದು, ದಿನಾಂಕ: 20.1.2001ರಂದು ನೀಡಿದ ಮಧ್ಯಂತರ ವರದಿಯಲ್ಲಿ ಸಚಿವಾಲಯ ಸುಧಾರಣೆ, ಜಿಲ್ಲಾಡಳಿತ ಸುಧಾರಣೆ ಮತ್ತು ರಾಜ್ಯದಲ್ಲಿ ಉತ್ತಮ ಆಡಳಿತ ನೀಡುವ ಕುರಿತು ಶಿಫಾರಸ್ಸುಗಳನ್ನು ನೀಡಿದೆ. ಆಯೋಗವು 13 ಇಲಾಖೆಗಳ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳ ಕಾರ್ಯ ಸಮೀಕ್ಷೆಯನ್ನು ನಡೆಸಿ, ದಿನಾಂಕ 27.12.2001ರಂದು ಅಂತಿಮ ವರದಿಯನ್ನು ನೀಡಿದೆ. ಈ ವರದಿಯಲ್ಲಿ ಸರಿಗಾತ್ರ ಕ್ರಮಗಳು, ಆರ್ಥಿಕ ಮಿತವ್ಯಯ ಕ್ರಮಗಳು, ಒಳ್ಳೆಯ ಆಡಳಿತ, ಇ–ಆಡಳಿತ, ಕಾರ್ಯ ಸಮೀಕ್ಷೆ ಶಿಫಾರಸ್ಸುಗಳು, ಯೋಜನೆಗಳ ಮರು ಪರಿಶೀಲನೆ ಹಾಗು ಸಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು ಮತ್ತು ಸರ್ಕಾರದಲ್ಲಿ ಈಗ ನಿರ್ವಹಿಸುತ್ತಿರುವ ಕೆಲವು ಕಾರ್ಯ ಚಟುವಟಿಕೆಗಳನ್ನು ಬಾಹ್ಯ ಮೂಲದಿಂದ ಪಡೆಯಲು ವಿಷಯಗಳನ್ನು ಗುರುತಿಸಿ, ಶಿಫಾರಸ್ಸು ಮಾಡಿರುತ್ತದೆ. ಆಯೋಗದ ಶಿಫಾರಸ್ಸುಗಳನ್ನು ರಾಜ್ಯದ ಆಡಳಿತದ ಮೇಲೆ ದೀರ್ಘ ಪರಿಣಾಮ ಉಂಟು ಮಾಡುವುದರಿಂದ ಶಿಫಾರಸ್ಸುಗಳನ್ನು ಪರಿಶೀಲಿಸಲು ದಿನಾಂಕ: 3.3.2001ರಂದು ಆಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಶ್ರೀ ಎಂ.ವೈ.ಘೋರ್ಪಡೆ ಇವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿಯೊಂದನ್ನು ರಚಿಸಿತ್ತು.

ಇಲಾಖೆಗಳು ಪ್ರಥಮವಾಗಿ ತಮ್ಮ ಇಲಾಖೆಗೆ ಸಂಬಂಧಪಟ್ಟ ಶಿಫಾರಸ್ಸುಗಳನ್ನು

ಪರಿಶೀಲಿಸಿ, ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಉನ್ನತ ಮಟ್ಟದ ಸಮಿತಿಯಲ್ಲಿ ಚರ್ಚಿಸಿ, ಇತರ ಶಿಫಾರಸ್ಸುಗಳ ಆಧಾರದ ಮೇಲೆ ಪ್ರಸ್ತಾವನೆಗಳನ್ನು ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಮಂಡಿಸಲು ಕ್ರಮ ತೆಗೆದುಕೊಂಡಿದೆ. ಸಚಿವ ಸಂಪುಟದ ಉಪ ಸಮಿತಿಯ ವಾಣಿಜ್ಯ ಮತ್ತು ಕೈಗಾರಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ನಗರಾಭಿವೃದ್ಧಿ ಮತ್ತು ಶಿಕ್ಷಣ ಇಲಾಖೆಗಳ ಕಾರ್ಯ ಸಮೀಕ್ಷೆ ಶಿಫಾರಸ್ಸುಗಳನ್ನು ಪರಿಶೀಲಿಸಿದೆ. ಕೃಷಿ ಸಮಾಜ ಕಲ್ಯಾಣ, ಲೋಕೋಪಯೋಗಿ, ಕಾರ್ಮಿಕ ಮತ್ತು ನೀರಾವರಿ ಇಲಾಖೆಗಳ ಪ್ರಸ್ತಾವನೆಗಳು ಸಮಿತಿಯ ಮುಂದೆ ಬರಬೇಕಾಗಿತ್ತು. ಈ ಹಂತದಲ್ಲಿ ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರು ಉಳಿದ ಎಲ್ಲಾ ಇಲಾಖೆಗಳು ನೇರವಾಗಿ ಸಚಿವ ಸಂಪುಟಕ್ಕೆ ಅವರ ಪ್ರಸ್ತಾವನೆಗಳನ್ನು ಮಂಡಿಸಲು ಸೂಚಿಸಿದೆ. ಇದುವರೆಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪುನರ್ ರಚನೆ, ವಿಭಾಗಾಧಿಕಾರಿಗಳ ಹುದ್ದೆಗಳ ರದ್ದತಿ, ವಿವಿಧ ಇಲಾಖೆಗಳಲ್ಲಿ ವಿಭಾಗೀಯ ಮಟ್ಟದ ಹುದ್ದೆಗಳನ್ನು ರದ್ದುಗೊಳಿಸುವ ಪ್ರಸ್ತಾವನೆ, ವರ್ಗಾವಣೆ ನೀತಿ, ಲೋಕಾಯುಕ್ತ ವಿಷಯ, ಇ-ಆಡಳಿತ ಕಾರ್ಯತಂತ್ರ ಇತ್ಯಾದಿ ವಿಷಯಗಳನ್ನು ಈಗಾಗಲೇ ಅನುಷ್ಠಾನಗೊಳಿಸ ಲಾಗಿದೆ.

ಶಿಫಾರಸುಗಳನ್ನು ಪರಿಶೀಲಿಸಲು ಹಾಗೂ ಸಚಿವ ಸಂಪುಟದ ಉಪಸಮಿತಿಗೆ ಸಲಹೆ ನೀಡಲು ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿತ್ತು. ಉಪಸಮಿತಿಯು ತದನಂತರ ಸಂಬಂಧಪಟ್ಟ ಇಲಾಖೆಗಳಿಗೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ನೀಡಿದ ನಿರ್ದೇಶನದ ಮೇರೆಗೆ ಸರ್ಕಾರವು ತೆಗೆದುಕೊಂಡ ನಿರ್ಣಯಗಳನ್ನು ಸರ್ಕಾರಿ ಆದೇಶಗಳಲ್ಲಿ ಕಾಲಕಾಲಕ್ಕೆ ಹೊರಡಿಸಲಾಗಿದೆ.

ಈಗಾಗಲೇ ಅನುಷ್ಠಾನಗೊಳಿಸಿದ ಪ್ರಮುಖ ವಿಷಯಗಳು ಅಂದರೆ,

ಅ) ವಿಭಾಗಾಧಿಕಾರಿಗಳ ಹುದ್ದೆ ಹಾಗೂ ಕಚೇರಿಗಳನ್ನು ರದ್ದುಗೊಳಿಸಲಾಗಿದೆ.

ಆ) ವಿಭಾಗೀಯ ಹಂತದ ಹುದ್ದೆಗಳನ್ನು ಕಚೇರಿಗಳೊಂದಿಗೆ ರದ್ದುಗೊಳಿಸ ಲಾಗಿದೆ.

ಇ) ಸಚಿವಾಲಯದಲ್ಲಿ ಪೀಠಾಧಿಕಾರಿ ಪದ್ಧತಿ ಹಂತ ಜಿಗಿಯುವಿಕೆ ಹಾಗೂ ಏಕ ಕಡತ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ಈ) ರಾಜ್ಯದ ತರಬೇತಿ ನೀತಿಯನ್ನು ಪ್ರಕಟಿಸಲಾಗಿದೆ.

ಉ) ಕರ್ನಾಟಕ ಮಾಹಿತಿ ಪಡೆಯುವ ಹಕ್ಕು ಅಧಿನಿಯಮ ಮತ್ತು ನಿಯಮಗಳು ಶಾಸನಗೊಳಿಸಲ್ಪಟ್ಟಿದೆ ಹಾಗೂ ಜಾರಿಗೊಳಿಸಲ್ಪಟ್ಟಿವೆ.

ಊ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000ವನ್ನು ಶಾಸನಗೊಳಿಸಲಾಗಿದೆ.

ಋ)ಸಚಿವಾಲಯದಲ್ಲಿ ಪತ್ರಗಳ ನಿರ್ವಹಣೆ ಹಾಗು ಕಡತಗಳ ನಿರ್ವಹಣೆ ಪದ್ಧತಿಯನ್ನು LAN ಮುಖಾಂತರ ಮಾಡಲಾಗುತ್ತಿದೆ.

ೠ)ವರ್ಗಾವಣ ³ ನಿಯಮಗಳನ್ನು ಜಾರಿಗೊಳಿಸಲಾಗಿದೆ.

ಎ) ಇಲಾಖೆಗಳಲ್ಲಿರುವ ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿ, ಅವುಗಳನ್ನು ಕಡಿತ ಗೊಳಿಸಲು ವಿಶೇಷ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸ ಲಾಗಿದೆ. ಹೆಚ್ಚುವರಿ ಸಿಬ್ಬಂದಿಯನ್ನು ಮರು ನೇಮಕಾತಿ ಮಾಡಲು ಸಿ.ಆ.ಸು.ಇಲಾಖೆ ಸೇವಾ ನಿಯಮಗಳು ವಿಭಾಗದಲ್ಲಿ ಮರು ನೇಮಕಾತಿ ಕೋಶ ವನ್ನು.

ಏ) ಆಡಳಿತ ಸುಧಾರಣಾ ಕ್ರಮಗಳನ್ನು ನಿರಂತರವಾಗಿ ಅನುಷ್ಠಾನಗೊಳಿಸ ಲಾಗುತ್ತಿದೆ.

3.) ಸರ್ಕಾರದ ಆಡಳಿತ ಸುಗಮವಾಗಿ ನಿರ್ವಹಿಸಲು ಈ ಕೆಳಕಂಡ ತರಬೇತಿ ಸಂಸ್ಥೆಗಳ ಮುಖಾಂತರ ತರಬೇತಿ ನೀಡಲಾಗುತ್ತಿದೆ.

ಅ) ಆಡಳಿತ ತರಬೇತಿ ಸಂಸ್ಥೆ, ಮೈಸೂರು

ಆ) ಜಿಲ್ಲಾ ತರಬೇತಿ ಸಂಸ್ಥೆಗಳು

ಇ) ಸಚಿವಾಲಯ ತರಬೇತಿ ಸಂಸ್ಥೆ

ಆಡಳಿತ ತರಬೇತಿ ಸಂಸ್ಥೆ 1959ರಲ್ಲಿ ಕೇಂದ್ರ ಸರ್ಕಾರವು ಸಿಬ್ಬಂದಿ ವರ್ಗದವರಿಗೆ ತರಬೇತಿಯ ಅವಶ್ಯಕತೆಯನ್ನು ಮನಗಂಡು Orientation study center ಎಂಬ ನಾಮಾಂಕಿತದಿಂದ ಮೈಸೂರಿನಲ್ಲಿ ಪ್ರಾರಂಭಿಸಿತು. 1967ರಲ್ಲಿ ಈ ತರಬೇತಿ ಸಂಸ್ಥೆಯನ್ನು ಮೈಸೂರು ಸರ್ಕಾರದ ವಶಕ್ಕೆ ನೀಡಿ ಅದರ ಹೆಸರನ್ನು ಆಡಳಿತ ತರಬೇತಿ ಸಂಸ್ಥೆ ಎಂದು ಬದಲಾಯಿಸಿತು. ಈ ತರಬೇತಿ ಸಂಸ್ಥೆ ಅಧೀನದಲ್ಲಿ 18 ಜಿಲ್ಲಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆಡಳಿತ ತರಬೇತಿ ಸಂಸ್ಥೆಯು ಕರ್ನಾಟಕ ಸರ್ಕಾರದ A ಮತ್ತು B ಸಮೂಹದ ಅಧಿಕಾರಿಗಳಿಗೆ ತರಬೇತಿ ನೀಡುತ್ತಿದೆ. ಜಿಲ್ಲಾ ತರಬೇತಿ ಸಂಸ್ಥೆಗಳು C ಮತ್ತು D ಸಮೂಹದ ನೌಕರರಿಗೆ ತರಬೇತಿಯನ್ನು ನೀಡುತ್ತಿದೆ.

ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆಯ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ ಜಂಟಿ ನಿರ್ದೇಶಕರು, ಬೋಧಕ ವರ್ಗದವರು ಮತ್ತು ಕಚೇರಿ ಸಿಬ್ಬಂದಿ ನಿರ್ವಹಿಸುತ್ತಾರೆ. ಜಂಟಿ ನಿರ್ದೇಶಕರು ಆಡಳಿತ ತರಬೇತಿ ಸಂಸ್ಥೆ ಮತ್ತು

ಜಿಲ್ಲಾ ತರಬೇತಿ ಸಂಸ್ಥೆಗಳ ಆಡಳಿತ ಮತ್ತು ತರಬೇತಿಯನ್ನು ನೋಡಿಕೊಳ್ಳುತ್ತಾರೆ. ತರಬೇತಿಯನ್ನು ಸಂಬಂಧಿಸಿದ ವಿಷಯಗಳಲ್ಲಿ ಪರಿಣಿತರಾದವರು ಬೋಧಕರಾಗಿ ಕಾರ್ಯನಿರ್ವಹಿಸುತ್ತಾರೆ. ಆಡಳಿತ ತರಬೇತಿ ಸಂಸ್ಥೆಯ ಅಂಗ ಸಂಸ್ಥೆಯಾಗಿ 1992ರಲ್ಲಿ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಡಿಯಲ್ಲಿ ಸ್ಥಾಪಿಸಲಾಗಿದೆ. ಎರಡು ಸಂಸ್ಥೆಗಳಿಗೂ ಸಹ ಮಹಾ ನಿರ್ದೇಶಕರೇ ಮುಖ್ಯಸ್ಥರಾಗಿರುತ್ತಾರೆ. ಈ ಸಂಸ್ಥೆಯಡೀ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಅಧಿಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಗ್ರಾಮೀಣಾಭಿವೃದ್ಧಿ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಹೊಸದಾಗಿ ರಚನೆಯಾದ ಚಾಮರಾಜನಗರ, ದಾವಣಗೆರೆ, ಬಾಗಲಕೋಟೆ, ಕೊಪ್ಪಳ, ಉಡುಪಿ, ಹಾವೇರಿ ಮತ್ತು ಗದಗ್ ಜಿಲ್ಲೆಗಳಲ್ಲಿ ಹೊರತುಪಡಿಸಿ, ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ತರಬೇತಿ ಸಂಸ್ಥೆಗಳಿವೆ. ಮೈಸೂರು, ಮಂಡ್ಯ, ಬೆಂಗಳೂರು ಮಂಗಳೂರು, ಧಾರವಾಡ, ಬಿಜಾಪುರ, ಗುಲ್ಬರ್ಗಾ, ಬೆಳಗಾವಿ, ಬಳ್ಳಾರಿ ಮತ್ತು ಶಿರ್ಸಿ ಜಿಲ್ಲಾ ತರಬೇತಿ ಸಂಸ್ಥೆಗಳು ಸ್ವಂತ ಕಟ್ಟಡದಲ್ಲಿವೆ. ಉಳಿದ ಜಿಲ್ಲಾ ಸಂಸ್ಥೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಆಡಳಿತ ತರಬೇತಿ ಸಂಸ್ಥೆಗೆ 2004–05ರ ಸಾಲಿನಲ್ಲಿ ಯೋಜನೆಯಡಿಯಲ್ಲಿ 8.50ಲಕ್ಷ ರೂ.ಆಯವ್ಯಯ ಕಲ್ಪಿಸಿದ್ದು, ಈ ಪೈಕಿ 7.30ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ. ಯೋಜನೇತರ ಅಡಿಯಲ್ಲಿ 56.45 ಲಕ್ಷ ರೂ.ಗಳನ್ನು ಒದಗಿಸಿದ್ದು, ಅದರಲ್ಲಿ 49.84 ಲಕ್ಷ ರೂ. ವೆಚ್ಚವಾಗಿರುತ್ತದೆ. 2005–06ನೇ ಸಾಲಿನಲ್ಲಿ ಯೋಜನಾ ಅಡಿಯಲ್ಲಿ 8.87 ಲಕ್ಷ ಹಾಗೂ ಯೋಜನೇತರ ಅಡಿಯಲ್ಲಿ 118.34 ಲಕ್ಷ ರೂ.ಗಳ ಅನುದಾನ ಕಲ್ಪಿಸಲಾಗಿದೆ.

ಸಚಿವಾಲಯ ತರಬೇತಿ ಸಂಸ್ಥೆಯು ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 53 ಟಿಇಪಿ 77, ದಿನಾಂಕ: 23.1.78ರಂತೆ ಸ್ಥಾಪನೆಯಾಗಿರುತ್ತದೆ. ಈ ಸಂಸ್ಥೆಗೆ 1 ನಿರ್ದೇಶಕರು ಹಾಗು ಇತರ ಅಧಿಕಾರಿ/ ಸಿಬ್ಬಂದಿಗಳನ್ನು ಸಹ ಮಂಜೂರಾತಿ ನೀಡಿದ್ದು, ಸಂಸ್ಥೆಯು ಬಾಡಿಗೆ ಕಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದೆ. 2004–05ನೇ ಸಾಲಿನ ಆಯವ್ಯಯದಲ್ಲಿ ರೂ.25ಲಕ್ಷ ಒದಗಿಸಿದ್ದು, ಈ ಪೈಕಿ 19.10 ಲಕ್ಷ ರೂ. ವೆಚ್ಚವಾಗಿರುತ್ತದೆ. 2005–06ನೇ ಸಾಲಿನಲ್ಲಿ 24.85 ಲಕ್ಷ ಆಯವ್ಯಯ ಕಲ್ಪಿಸಲಾಗಿದೆ. ಸಚಿವಾಲಯ ತರಬೇತಿ ಸಂಸ್ಥೆಯು ಮುಖ್ಯವಾಗಿ ಸಚಿವಾಲಯದ ಸಿಬ್ಬಂದಿಗೆ ಹಾಗು ಕ್ಷೇತ್ರ ಇಲಾಖೆಗೆ ಮೇಲ್ವಿಚಾರಕ ಸಿಬ್ಬಂದಿಗೆ ವಿಧಾನ ಮಂಡಲದ ಸಚಿವಾಲಯ ಸಿಬ್ಬಂದಿ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಸಿಬ್ಬಂದಿಗೆ ಕಚೇರಿ ಕಾರ್ಯವಿಧಾನ, ಸೇವಾ ವಿಷಯಗಳು ಮತ್ತಿತರ ವಿಷಯಗಳಲ್ಲಿ ತರಬೇತಿ ನೀಡುತ್ತಾ ಬಂದಿರುತ್ತದೆ.

4. ರಾಜ್ಯದಲ್ಲಿ ಜನಸಾಮಾನ್ಯರಿಗೆ ಮಾಹಿತಿಯನ್ನು ಪಡೆಯುವ ಅವಕಾಶದ ಹಕ್ಕಿಗಾಗಿ ಮಾಹಿತಿ ಪಡೆಯಲು ಹಕ್ಕು ಅಧಿನಿಯಮವನ್ನು ಕಾರ್ಯಗತಗೊಳಿಸ ಲಾಗುವುದು.

5. ಸರ್ಕಾರದ ವ್ಯವಹಾರಗಳನ್ನು ಚುರುಕುಗೊಳಿಸಲು ಮತ್ತು ಅದರ ಲಾಭಗಳನ್ನು ನಾಗರಿಕರಿಗೆ ಒದಗಿಸುವ ದೃಷ್ಟಿಯಿಂದ 2003ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಪ್ರತ್ಯೇಕವಾಗಿ ಇ–ಆಡಳಿತ ಸಚಿವಾಲಯವನ್ನು ರೂಪಿಸಲಾಗಿದೆ. ಇ–ಆಡಳಿತ ಸಚಿವಾಲಯವು ಸಿಆಸುಇ (ಆಡಳಿತ ಸುಧಾರಣೆ) ಇಲಾಖೆಯ ಒಂದು ಭಾಗವಾಗಿದೆ. ಇ–ಆಡಳಿತ ಸಚಿವಾಲಯವು ಕಾರ್ಯದರ್ಶಿ ಮತ್ತು ಉಪ ಕಾರ್ಯದರ್ಶಿ ಹಾಗು ಪೀಠಾಧಿಕಾರಿಯನ್ನು ಹೊಂದಿರುತ್ತದೆ. ಇಲಾಖೆಗೆ ಬೇಕಾದ ಭಾಗಶಃ ಸಿಬ್ಬಂದಿಯನ್ನು ಮಾಹಿತಿ ತಂತ್ರಜ್ಞಾನ ನಿರ್ದೇಶನಾಲಯದಿಂದ ಎರವಲು ಪಡೆಯಲಾಗಿದೆ. ಇ–ಆಡಳಿತ ಸಚಿವಾಲಯವು ಈ ಕೆಳಕಂಡ ಚಟುವಟಿಕೆಗಳನ್ನು ಮಾಡಿರುತ್ತದೆ.

ಅ) ಸಚಿವಾಲಯ ಆಟೋಮೇಶನ್:–

ರಾಜ್ಯ ಸರ್ಕಾರದ ಸಚಿವಾಲಯಗಳಲ್ಲಿ ಕಡತಗಳ ಚಲನವಲನ, ಬಾಕಿಯಿರುವ ಪತ್ರಗಳ ದಾರಿ ಗುರುತಿಸಲು ಸಚಿವಾಲಯ ವಾಹಿನಿಯೆಂಬ ತಂತ್ರಾಂಶವನ್ನು ಬಳಸಲಾಗುತ್ತಿದೆ. ಈ ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಬಳಸಲು ಪ್ರತಿಯೊಂದು ಇಲಾಖೆಗೂ ಒಬ್ಬ ಸಮಾಲೋಚಕರನ್ನು ನೇಮಿಸಲಾಗಿದೆ. ಈ ತಂತ್ರಾಂಶವನ್ನು ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ನೌಕರರಿಗೆ ತರಬೇತಿಯನ್ನು ನೀಡ ಲಾಗುತ್ತಿದೆ. ನಾಗರಿಕರ ಅನುಕೂಲಕ್ಕಾಗಿ ಟಚ್ ಸ್ಕ್ರೀನ್ ಕಿಯೋಸ್ಕ್‌ಗಳನ್ನು ಬಹು ಮಹಡಿ ಕಟ್ಟಡದಲ್ಲಿ ಅಳವಡಿಸಲಾಗಿದ್ದು, ನಾಗರಿಕರು ಕಡತ ಹಾಗು ಪತ್ರಗಳ ಮಾಹಿತಿಯನ್ನು ವೀಕ್ಷಿಸಬಹುದಾಗಿದೆ.

ಆ) ಮಿದು ಸಮಯ ವ್ಯವಸ್ಥೆ:

ಈ ಯೋಜನೆಯನ್ನು ಶಾಖಾಧಿಕಾರಿ ಹುದ್ದೆಗಿಂತ ಮೇಲಿನ ವರ್ಗದ ಅಧಿಕಾರಿಗಳಿಗಾಗಿ ಪ್ರಾರಂಭಿಸಿದ್ದು, ಇದು ಅಧಿಕಾರಿಗಳ ಕಾರ್ಯದಕ್ಷತೆ ಹೆಚ್ಚಿಸಲು ಉಪಯುಕ್ತವಾಗಿದೆ. ಈ ವ್ಯವಸ್ಥೆಯನ್ನು ಎಲೆಕ್ಟ್ರಾನಿಕ್ ವ್ಯವಸ್ಥೆಗೆ ವರ್ಗಾವಣೆ ಮಾಡಿ ಅನುಷ್ಠಾನಗೊಳಿಸಿದೆ. ಇದಲ್ಲದೆ 650 ಅಧಿಕಾರಿಗಳನ್ನು ಇದರ ಬಳಕೆಗಾಗಿ ತರಬೇತಿಗೊಳಿಸಿದೆ.

ಇ) ತರಬೇತಿ:

ಸಚಿವಾಲಯ ಅಧಿಕಾರಿ/ಸಿಬ್ಬಂದಿಗೆ ಗಣಕಗಳ ಬಗ್ಗೆ ಮೂಲ ತರಬೇತಿ ಗಳನ್ನೊಳಗೊಂಡಂತೆ ತರಬೇತಿ ನೀಡಲು ಕ್ರಮ ಕೈಗೊಂಡಿದ್ದು, ಈವರೆಗೆ 65 ತಂಡಗಳಲ್ಲಿ 1414 ನೌಕರರನ್ನು ತರಬೇತಿಗೊಳಿಸಲಾಗಿದೆ. ಕಡತ ನಿರ್ವಹಣಾ

ವ್ಯವಸ್ಥೆ ಮತ್ತು ಪತ್ರ ನಿರ್ವಹಣಾ ವ್ಯವಸ್ಥೆ ಕಡತ ಹಾಗು ಪತ್ರಗಳ ಚಲನವಲನಗಳನ್ನು ಗುರುತಿಸಲು ತಜ್ಞ ತರಬೇತುದಾರರಿಂದ ತರಬೇತಿಯನ್ನು ನೀಡಲಾಗುತ್ತಿದೆ.

ಈ) ಪ್ರಾಯೋಗಿಕ ಕಾಗದ ರಹಿತ ಕಚೇರಿ:

ಟಾಟಾ ಕನ್ಸಲ್‌ಟೆನ್ಸಿ ಸರ್ವೀಸಸ್ ಇವರ ಸಮಾಲೋಚನೆಯಲ್ಲಿ ಕಾಗದ ರಹಿತ ಕಚೇರಿಯನ್ನು ಅನುಷ್ಠಾನಗೊಳಿಸಲು ಪ್ರಾಯೋಗಿಕವಾಗಿ ನಗರಾಭಿವೃದ್ಧಿ ಮತ್ತು ಅರಣ್ಯ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುತ್ತದೆ. ಈ ಯೋಜನೆಯು ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳುವ ಮುನ್ನ ಮೂರು ತಿಂಗಳ ಕಾಲದವರೆಗೆ ಚಾಲನೆಯಲ್ಲಿದ್ದು, ಈ 2 ಇಲಾಖೆಗಳ ಪ್ರತಿಯೊಬ್ಬ ನೌಕರರಿಗೂ ತರಬೇತಿ ನೀಡಲಾಗಿದೆ.

ಉ) ಇತರ ಚಟುವಟಿಕೆಗಳು:

ಇ-ಆಡಳಿತ ಸಚಿವಾಲಯವು ಮಾರಾಟಗಾರರ ನೋಂದಣಿ, ಇ-ಆಸ್ತಿ ಪಟ್ಟಿ ತಂತ್ರಾಂಶ ಸಾಮಾರ್ಥ್ಯ ನಿರ್ಮಾಣ ಕಾರ್ಯಗಾರ, ಮುಖ್ಯ ಮಾಹಿತಿ ಅಧಿಕಾರಿಗಳ ತರಬೇತಿ, ಮುಖ್ಯ ಕಾರ್ಯದರ್ಶಿಯವರ ಮಂಗಳವಾರದ ಸಭೆ, ಇ-ಆಡಳಿತ ಯೋಜನೆಗಳ ಅನುಮೋದನೆ, ಇಲಾಖೆಗಳ ಸಾಮಾನ್ಯ ಯೋಜನೆಗಳು ಈ ಸೌಲಭ್ಯವನ್ನು ಎಲ್ಲಾ ಇಲಾಖೆಗಳಿಗೂ ಮುಕ್ತವಾಗಿರಿಸಲಾಗಿದೆ.

ಊ) ಇ-ಆಡಳಿತ ಸಚಿವಾಲಯಕ್ಕಾಗಿ 2004-05ನೇ ಸಾಲಿನಲ್ಲಿ ಯೋಜನೆಯಡಿಯಲ್ಲಿ ರೂ.102 ಲಕ್ಷ ಯೋಜನೇತರ ಅಡಿಯಲ್ಲಿ ರೂ.100 ಲಕ್ಷಗಳನ್ನು ಒದಗಿಸಲಾಗಿತ್ತು. ಅದಲ್ಲದೇ ಭಾರತ ಸರ್ಕಾರದ ರಾಜ್ಯದತ್ತ ಕೇಂದ್ರನ್ನು ಸ್ಥಾಪಿಸಲು ರೂ. 494 ಲಕ್ಷಗಳನ್ನು ನಿಗದಿಪಡಿಸಲಾಗಿತ್ತು. ಇ-ಆಡಳಿತ ಯೋಜನೆಯನ್ನು ಅನುಷ್ಠಾನದಲ್ಲಿರುವ ಅಂತರವನ್ನು ಕಡಿಮೆ ಮಾಡಲು ನಿಯಮಗಳನ್ನು ರೂಪಿಸಲಾಗುತ್ತಿದೆ.

ಕ್ರಮ	ಇಲಾಖೆಯ ಹೆಸರು	ಕಡಿತಗೊಳಿಸಲು ತೀರ್ಮಾನಿಸಿದ ಹುದ್ದೆಗಳ ಸಂಖ್ಯೆ
1.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	3000
2.	ಭಾರತೀಯ ವೈದ್ಯ ಪದ್ಧತಿ	162
3.	ಔಷಧಿ ನಿಯಂತ್ರಣ	26
4.	ವೈದ್ಯಕೀಯ ಶಿಕ್ಷಣ	100
5.	ಪ್ರಾಥಮಿಕ ಶಿಕ್ಷಣ	243
6.	ಸರ್ಕಾರಿ ಮುದ್ರಣಾಲಯ	62
7.	ಗ್ರಂಥಾಲಯ	7
8.	ತಾಂತ್ರಿಕ ಶಿಕ್ಷಣ	262

9.	ಕಾಲೇಜು ಶಿಕ್ಷಣ	160
10.	ಲೋಕ ಶಿಕ್ಷಣ	26
11.	ವೃತ್ತಿ ಶಿಕ್ಷಣ	20
12.	ಅಗ್ನಿ ಶಾಮಕದಳ	78
13.	ಹೋಂ ಗಾರ್ಡ್ಸ್	20
14.	ಸಾರಿಗೆ	117
15.	ಪೊಲೀಸ್	1362
16.	ಪಶುಸಂಗೋಪನೆ	966
17.	ಮೀನುಗಾರಿಕೆ	160
18.	ಕೈಗಾರಿಕೆ ಮತ್ತು ವಾಣಿಜ್ಯ	239
19.	ಜವಳಿ	20
20.	ಸರಕು ಖರೀದಿ	10
21.	ಗಣಿ ಮತ್ತು ಭೂ ವಿಜ್ಞಾನ	60
22.	ರೇಷ್ಮೆ ಮತ್ತು ಭೂ ವಿಜ್ಞಾನ	110
23.	ರೇಷ್ಮೆ	636
24.	ಕಾರ್ಮಿಕ	90
25.	ಇಎಸ್‌ಐ	410
26.	ಕಾರ್ಖಾನೆ ಮತ್ತು ಬಾಯ್ಲರ್	19
27.	ಉದ್ಯೋಗ ಮತ್ತು ತರಬೇತಿ	192
28.	ಕೃಷಿ ಮಾರುಕಟ್ಟೆ	230
29.	ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ	81
30.	ಸಹಕಾರ	510
31.	ಲೋಕಾಯುಕ್ತ	32
32.	ಆಡಳಿತ ತರಬೇತಿ ಸಂಸ್ಥೆ ಮೈಸೂರು	43
33.	ಕರ್ನಾಟಕ ಆಡಳಿತ ನ್ಯಾಯ ಮಂಡಳಿ	212
34.	ಕರ್ನಾಟಕ ಲೋಕಸೇವಾ ಆಯೋಗ	10
35.	ಕರ್ನಾಟಕ ಸರ್ಕಾರದ ಸಚಿವಾಲಯ	400
36.	ಪ್ರವಾಸೋದ್ಯಮ	26
37.	ಸರ್ಕಾರಿ ವೈಮಾನಿಕ ತರಬೇತಿ ಶಾಲೆ	16
38.	ಯುವಜನ ಸೇವಾ ಮತ್ತು ಕ್ರೀಡೆ	53
39.	ಎಸ್‌ಸಿಸಿ	180

40.	ವಾರ್ತಾ ಮತ್ತು ಪ್ರಚಾರ	116
41.	ಆರ್ಥಿಕ ಮತ್ತು ಸಾಂಖ್ಯಿಕ	82
42.	ಸರ್ಕಾರಿ ಗಣಕ ಕೇಂದ್ರ	20
43.	ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು	20
44.	ಗ್ರಾಮೀಣಾಭಿವೃದ್ಧಿ	393
45.	ಪಿಹೆಚ್ಇ	62
46.	ಮುದ್ರಾಂಕ ಮತ್ತು ನೊಂದಣಿ	96
47.	ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆ	628
48.	ಕಂದಾಯ	606
49.	ನಗರ ಯೋಜನೆ	40
50.	ಕನ್ನಡ ಮತ್ತು ಸಂಸ್ಕೃತಿ	16
51.	ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ	8
52.	ಆಹಾರ ಮತ್ತು ನಾಗರಿಕ ಸರಬರಾಜು	98
53.	ಕಾನೂನು ಮಾಪನ ಶಾಸ್ತ್ರ	35
54.	ಸಮಾಜ ಕಲ್ಯಾಣ	543
55.	ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ	236
56.	ವಾಣಿಜ್ಯ ತೆರಿಗೆ	372
57.	ರಾಜ್ಯ ಲಾಟರಿ ಮತ್ತು ಸಣ್ಣ ಉಳಿತಾಯ	17
58.	ಕರ್ನಾಟಕ ಸರ್ಕಾರಿ ವಿಮಾ	119
59.	ರಾಜ್ಯ ಲೆಕ್ಕ ಪತ್ರ	26
60.	ಅಬಕಾರಿ	325
61.	ಖಜಾನೆ	185
62.	ಲೋಕೋಪಯೋಗಿ	1262
63.	ಕೃಷಿ	1550
64.	ತೋಟಗಾರಿಕೆ	150
65.	ಭಾರಿ ನೀರಾವರಿ	1800
66.	ಸಣ್ಣ ನೀರಾವರಿ	234
67.	ಭಾಷಾಂತರ	7
68.	ಅಭಿಯೋಗಗಳ ಮತ್ತು ಸರ್ಕಾರಿ ವ್ಯಾಜ್ಯಗಳು	67
69.	ಅರಣ್ಯ	416
	ಗುರುತಿಸಿದ್ದು	**20142**
	ರದ್ದುಪಡಿಸಿದ್ದು	**18314**

No. of Posts recommended by the Committee for abolition of vacant post in various departments as on 24-06-2005

Sl. No.	Name of the Department	No of posts Sanctioned as on 01-04-2000	No. of posts filled as on 01-04-2000	No. of Vacant Posts as on 01-04-2000	No. of posts Recommended by the Committee for Abolition under 80% cut
1.	Animal Husbandry & Veterinary Services	16343	15611	3412	825
2.	Fisheries Department	-	-	-	192
3.	Labour Department (Training)	2639	1882	757	305
4.	Labour Department (ESI)	-	-	-	380
5.	Labour Department (Employment)	-	-	-	92
6.	Labour Department (Labour Commissioner)	875	694	181	17
7.	Chief Inspector of Factories & Boilers	-	-	-	40
8.	Foods and Civil Supplies	1587	-	117	52
9.	Weights & Measures Department	546	-	140	23
10.	Agriculture Department	13861	12181	1680	563
11.	Horticulture Department	4645	-	461	79
12.	Women & Child Development	5920	3492	2428	517
13.	Department of Disabled Welfare	433	-	206	53

1	2	3	4	5	6
14.	Kannada & Culture Department	684	532	152	57
15.	C &I (Mines & Geology)	-	-	152	75
	Sericulture Department	-	-	-	289
	C & I	-	-	-	69
16.	Home Department	77172	-	-	17
17.	Energy Department	329	202	46	46
18.	Planning Department	1048	-	219	114
19.	Forest Department	10825	8460	2365	832
20.	Revenue Department	-	-	-	487
21.	Revenue Department (Stamps & Registration)	1636	1385	25	35
22.	Revenue Department (SSZR)	6536	6380	1456	591
23.	Health & Family Welfare	-	-	-	35
24.	Drugs Control Department	-	-	-	12
25.	Homeopathy Department	-	-	-	297
26.	ITY	-	-	-	63
27.	Finance Department (Treasury)	-	-	-	113
28.	ATI-Mysore (DPAR)	331	-	106	7
29.	Collegiate Education (ED)	-	-	-	50
30.	Technical Education (ED)	-	-	-	239

1	2	3	4	5	6
31.	Printing Press (ED)	-	-	-	169
32.	Adult Education (ED)	-	-	-	06
33.	NCC (ED)	-	-	-	239
34.	Department of Public Instruction (ED)	16062	-	-	98
35.	Pre-University Board (ED)	972	-	195	31
36.	Public Libraries (ED)	1334	-	120	09
					7048

Note: Proposals of the department at Sl.No. 5,7,15,28, were not discussed before the Committee. The department have taken action as per the time to time instructions of DPAR (AR)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಬಹಳ ಚಿಕ್ಕದಾಗಿದ್ದು, ಬಹಳ ವಿಶಾಲವಾದ ಉತ್ತರಬಂದಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ, ಆಡಳಿತ ಸುಧಾರಣೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನೆಂದು ನಾನು ಕೇಳಿದ್ದೇನೆ. ಜನಸಾಮಾನ್ಯರ ಮಟ್ಟಕ್ಕೆ ಆಡಳಿತ ಹೋಗಬೇಕು, ಅದಕ್ಕೆ ಏನು ಕ್ರಮವನ್ನು ಕೈಗೊಂಡಿದ್ದೀರಿ? ಎರಡನೆಯದು ವರ್ಗಾವರ್ಗಿ. ಈ ವರ್ಗಾವರ್ಗಿಯಿಂದ ಪ್ರತಿವರ್ಷ ಇದನ್ನಿಟ್ಟುಕೊಂಡರೆ ಆಡಳಿತ ಸುಧಾರಣೆ ಆಗುತ್ತದೆಯೆ ಅಂತ. 7 ತಿಂಗಳಾಯಿತು ಅಂದರೆ ವರ್ಗಾವರ್ಗಿ ಶುರುವಾಗುತ್ತದೆ. ಅವರು ಮೂರು ತಿಂಗಳು ಕಾರ್ಯಾಲಯ ಬಿಟ್ಟು ಶಾಸಕರ ಹಿಂದೆ ಓಡಾಡುತ್ತಾರೆ. ಇದು ಸತ್ಯ, ನೀವು ಅಲ್ಲಿಗೆ ಇಲ್ಲಿಗೆ ಹಾಕಿಸಿಕೊಡಿ ಅಂತ. ವರ್ಗಾವಣೆಯನ್ನು ವರ್ಷಕ್ಕೊಮ್ಮೆ ಮಾಡಬೇಕೆ ಅಥವಾ ಮೂರು ವರ್ಷಕ್ಕೊಮ್ಮೆ ಮಾಡಬೇಕೇ ಹಿಂದೆ ಆರ್.ಗುಂಡೂರಾವ್ ಸಚಿವರಾಗಿದ್ದಾಗ ಅವರು ಸಚಿವರಾಗಿದ್ದರು ಮೂರು ವರ್ಷಕ್ಕೊಂದು ಸಾರಿ ವರ್ಗಾವರ್ಗಿ. ಆ ವ್ಯವಸ್ಥೆ ಸರಿಯೇ? ಅಥವಾ ವರ್ಷಕ್ಕೊಮ್ಮೆ ಸರಿಯೇ ಎಂದು ಸರ್ಕಾರ ತಿಳಿಸಬೇಕು. ಅತಿ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಶಹಭಾಶಗಿರಿ ಕೊಡುತ್ತೇನೆ. ನಿಜಲಿಂಗಪ್ಪನವರ ಕಾಲದಿಂದ ನಾನು ನೋಡಿದ್ದೇನೆ, ಜನರ ಅರ್ಜಿಗೆ ಸಹಿ ಹಾಕುವುದರಲ್ಲಿ ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಗಿನಿಸ್ ದಾಖಲೆಗೆ ಹೋಗುತ್ತದೆ ಯಾವ ಯಾವ ಶಾಸಕರೇ ಆಗಲಿ ರಾಜ್ಯದ ಇತಿಹಾಸದಲ್ಲೇ ಇಂತಹ ಧರಂಸಿಂಗ್ ಅಂತ ಅವರ ಹೆಸರು, ಆದರೆ ಅವರು ನಡೆದುಕೊಳ್ಳುವುದು ಧರ್ಮಸಿಂಗ್. ಮಹಾಭಾರತದಲ್ಲಿ ಧರ್ಮರಾಯ ಏನಿದ್ದ ಆ ಹೆಸರು ಅನ್ವರ್ಥನಾಮವಾಗುತ್ತದೆ ನಾನು ಸಾವಿರಾರು ಸೈನ್ ಹಾಕಿರುವುದು ನೋಡಿದ್ದೇನೆ ಕರ್ನಾಟಕದ ಇತಿಹಾಸದಲ್ಲೇ ನಕಾರಾತ್ಮಕ ನಾನಂತೂ ನೋಡಿಲ್ಲ. ಒಬ್ಬರದೂ ನೋಡಲಿಲ್ಲ. ಆದರೆ ಅವರು ಹಾಕಿದಂತಹ ಸಹಿ ಬಗ್ಗೆ ನಾನು ಏನು ಹೇಳುತ್ತೇನೆ ಅವರಿಗೆ ಅಂದರೆ ಒಂದು ಸಾರಿ ಸಹಿ ಹಾಕಿದ ಮೇಲೆ ಅದಕ್ಕೆ ಕೆಳಹಂತದವರೆಗೆ ಅಧಿಕಾರಿಗಳು ಯಾರಿದ್ದಾರೆ, ಅದಕ್ಕೆ ಬೆಲೆ ಕೊಡಲೇಬೇಕು. ಇವತ್ತು ಅದು ಆಗುತ್ತಾ ಇಲ್ಲ. ಮುಖ್ಯಮಂತ್ರಿಗಳೇ ನಿಮ್ಮ ಸಹಿ ರಾಮಬಾಣ ಇದ್ದಂತೆ, ಸುಗ್ರೀವಾಜ್ಞೆ ಇದ್ದಂತೆ, ಹೈದರಾಲಿ ಕಾಲದಲ್ಲಿ ಬರಿ ಉಂಗುರ ಹೀಗೆ ಒತ್ತಿಬಿಡುತ್ತಿದ್ದ, ಹೈದರಾಲಿಗೆ ಸಹಿ ಬರುತ್ತಿರಲಿಲ್ಲ, ಆ

ಪರಿಸ್ಥಿತಿ ಎಷ್ಟು ಧರ್ಮವಾಗಿತ್ತು, ನೀವು ಅಷ್ಟೇ ರೀತಿ ಮಾಡುವಾಗ ಮುಖ್ಯಮಂತ್ರಿ ನಿಮ್ಮ ಸಹಿ ಅಂದರೆ ಅದು ಅಂತಿಮ ಅದರ ಬಗ್ಗೆ ಯಾರೂ ಚಕಾರ ಎತ್ತಬಾರದು. ಆದ್ದರಿಂದ ನಿಮ್ಮ ಸಹಿ ಮಾಡಿದ ತಕ್ಷಣ ಕಟ್ಟುನಿಟ್ಟಾಗಿ ಅಂತಿಮ ಹಂತ ತೀರ್ಮಾನ ಮಾಡುವುದಕ್ಕೆ ಏನು ಕೈಗೊಂಡಿದ್ದೀರಿ ತಿಳಿಸಿ.

ಶ್ರೀ ಧರಂಸಿಂಗ್: ಅಧ್ಯಕ್ಷರೆ, ನಾನು ಆಡಳಿತ ಸುಧಾರಣೆ ಬಗ್ಗೆ ಕೆಂಗಲ್ ಹನುಮಂತಯ್ಯರಿಂದ ಹಿಡಿದು ಹಾರ್ನಳ್ಳಿ ರಾಮಸ್ವಾಮಿ ವರದಿ ಸಲ್ಲಿಸಿದ ಮೇಲೆ ಏನೇನು ಕೇಳುತ್ತಾರೆ ಅಂತ ಬಹಳ ರೆಡಿಯಾಗಿ ಬಂದಿದ್ದೆ. ಆದರೂ ಪ್ರಸ್ತುತ ಸಮಸ್ಯೆಗಳ ಬಗ್ಗೆ ಎತ್ತಿದ್ದೀರಿ. ನಾನು ರಾಜ್ಯದ ಮುಖ್ಯಮಂತ್ರಿಯಾಗಿದೇನೆ. ಇವತ್ತು ಜನಪ್ರತಿನಿಧಿಗಳು ನನ್ನ ಕಡೆ ಬರುತ್ತಾರೆ. ಅವರು ಬರುವ ಸಮಯದಲ್ಲಿ 6.30ಕ್ಕೆ ಒಬ್ಬ ಪ್ರೊಪೇಶನರಾಗಿ ತಾವು ಬನ್ನಿ, ನನ್ನ ಮನೆಗೆ. ರಾತ್ರಿ 10ಗಂಟೆ ತನಕ. ಇದೇನಾಗುತ್ತದೆ. ಸಮಯ ಬದಲಾವಣೆಯಾಗಿದೆ. ಆಗಿನ ಕಾಲದಲ್ಲಿ ದಿವಾನರು ಉಂಗುರ ಹಾಕುತ್ತಿದ್ದರು ಅನ್ನುವಂತೆ ಅಲ್ಲ. ಬಹಳ ವಿಶೇಷವಾದ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಗಳು ಕೆಲಸ ಮಾಡಬೇಕಾಗುತ್ತದೆ. ಪ್ರತಿಯೊಬ್ಬರು ಬಂದು ಕಾಗದ ಕೊಟ್ಟ ಮೇಲೆ ನಾನು ಪರಿಶೀಲಿಸಿ ಮಂಡಿಸಿ ಅಂತ ಬರೆಯುತ್ತೇನೆ ಆದೇಶ ಅಂತ ಬರೆಯುತ್ತೇನೆ ಅದು ಇಲಾಖೆಗೆ ಹೋಗುತ್ತದೆ ಬರುತ್ತದೆ ನೀವು ಬರುತ್ತೀರಿ ನೀವು ಹೋದ ಮೇಲೆ ಮತ್ತೊಬ್ಬರು ಬರುತ್ತಾರೆ.

ಇವೆಲ್ಲ 28 ಇದೆ ಅದನ್ನೆಲ್ಲಾ ಪ್ರಸ್ತಾಪಿಸುವುದಿಲ್ಲ. ಒಂದು ಏನೆಂದರೆ ನಾನು ಮುಖ್ಯಮಂತ್ರಿಯಾಗಿರುವಾಗ ಹೆಚ್ಚಿನ ಒತ್ತಡ ಶಾಸಕರ ಮೇಲಿದೆ. ಶಾಸಕರ ಕಷ್ಟಕಾರ್ಪಣ್ಯ ಕೂಡ ಗೊತ್ತಿದೆ. ಗುಂಡೂರಾವ್ ಕಾಲದ ವರ್ಗಾವಣೆ ಅದು ಒಂದು ರಾಜಕೀಯ ಸಂದರ್ಭ ರಾಜಕೀಯವಾಗಿ ಅದೊಂದು ತರಹ ಬೇರೆ. ನೀವು ಆಗಲೂ ಕೂಡ ಶಾಸಕರಾಗಿದ್ದೀರಿ. ಬಹಳ ಜನ ಹೇಳುತ್ತಾರೆ, ಗುಂಡುರಾವ್ ಕಾಲ ಅತ್ಯುತ್ತಮವಾಗಿತ್ತು ಅಂತ. ಆಗ ನಾನು ಎಚ್‌ಯುಡಿ ಸಚಿವನಾಗಿದ್ದೆ ಹೌಸಿಂಗ್ ಕಾರ್ಪೊರೇಷನ್ ಕರ್ನಾಟಕ ನಗರ ಜಲಸರಬರಾಜು ಮಂಡಲಿ ನಮ್ಮಲ್ಲಿತ್ತು ಕೊಳಚೆ ನಿರ್ಮೂಲನಾ ಪ್ರದೇಶ ಮಂಡಳಿ ನಮ್ಮಲ್ಲಿತ್ತು. ಇವೆಲ್ಲ ಇದ್ದರೂ ವರ್ಗಾವಣೆ ಭಾರ ಆಗಿನ ಕಾಲದಲ್ಲಿ ಏನೂ ಇರಲಿಲ್ಲ. ಇವತ್ತೇನಾಗಿದೆ, ವಿಶೇಷವಾದ

ಪರಿಸ್ಥಿತಿಯಲ್ಲಿ ಅದೂ ಸಮ್ಮಿಶ್ರ ಸರ್ಕಾರದಲ್ಲಿ ಬಹಳ ರೀತಿಯಲ್ಲಿ ನಾವು ಸರಿಯಾದ ರೀತಿ ಅನುಸರಿಸಿಕೊಂಡು ಹೋಗುವ ರೀತಿ ಮಾಡುತ್ತಿದ್ದೇನೆ. ವರ್ಗಾವಣೆಯನ್ನು 6 ಪರ್ಸೆಂಟ್‌ಗಿಂತ ಹೆಚ್ಚು ಮಾಡಬಾರದು ಅಂತ ಹೇಳಿದ್ದೇನೆ ಇವತ್ತು. ವರ್ಗಾವಣೆಗೆ ಈಗಾಗಲೇ ನಾವು ತಡೆಹಿಡಿದಿದ್ದೇವೆ. ರಾಜ್ಯದಲ್ಲಿ ಆಡಳಿತ ಸುಧಾರಣೆಯಾಗುವ ರೀತಿಯಲ್ಲಿ ಸಲಹೆ ಸೂಚನೆ ಕೊಟ್ಟಿದ್ದೇನೆ. ಕಟ್ಟುನಿಟ್ಟಾಗಿ ಕರ್ನಾಟಕದಲ್ಲಿ ಪಾಲನೆ ಮಾಡಿದ್ದೆನೆ. ತಮ್ಮ ಭಾವನೆ ಏನಿದೆ ಆ ಮೇರೆಗೆ ಹೋಗಲು ತಮ್ಮ ಸಹಕಾರ ಕೊಡಬೇಕು ಅಂತ ಕೇಳಿಕೊಳ್ಳುತ್ತೇನೆ.

.ಶ್ರೀ ಬಿ.ಎಸ್.ಯಡಿಯೂರಪ್ಪ: ವಿಧಾನಸೌಧದಲ್ಲಿರುವ ನಮ್ಮ ಅಧಿಕಾರಿಗಳು ಅಧಿವೇಶನ ಬಿಟ್ಟು ಬೇರೆ ಸಂದರ್ಭದಲ್ಲಿ ವಿಧಾನಸೌಧ ಬಿಟ್ಟು ಕದಲುತ್ತಾ ಇಲ್ಲ. ಆ ಜಿಲ್ಲೆಗೆ ಹೋಗಿ ಆ ತಾಲೂಕುಗಳಲ್ಲಿ ದಿಢೀರ್ ಭೇಟಿ ನೀಡಿ ಆಡಳಿತದಲ್ಲಿ ಬಿಗಿ ತರುವಂತಹ ಪ್ರಯತ್ನ ಏನು ನಡಿದಿತ್ತು. ಹಿಂದೆ ಅದು ಸಂಪೂರ್ಣ ನಿಂತುಹೋಗಿದೆ. ಇವತ್ತು ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳು ತಾಲೂಕು ಮಟ್ಟಕ್ಕೆ ಹೋಗುವುದು ಅಪರೂಪವಾಗಿದೆ. ಹೀಗಾಗಿ ಶ್ರೀ ಸಾಮಾನ್ಯ ಪ್ರತಿ ಕೆಲಸಕ್ಕೂ ಶಾಸಕರ ಬೆನ್ನತ್ತಿ ಬರುವುದಾಗಿ ಬಿಟ್ಟಿದೆ, ನೋಡಿ ನಿಮ್ಮ ಹತ್ತಿರ ಇಲ್ಲಿ ಶಾಸಕರು ಸಾಲಾಗಿ ನಿಂತಿದ್ದಾರೆ ಮನವಿ ಕೊಡುತ್ತಿದ್ದಾರೆ ಹತ್ತರಲ್ಲಿ 8 ವರ್ಗಾವಣೆದಿರುತ್ತದೆ. ಯಾವುದು ಮೇಸ್ಟ್ರುಗಳದು ಯಾರದೋ ಫಾರೆಸ್ಟ್‌ದು ಯಾರದೋ ಗಾರ್ಡ್ ಈ ಮಟ್ಟಲ್ಲಿರುವುದನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವರ್ಗಾವಣೆ ಮಾಡುವುದನ್ನು ಸಂಪೂರ್ಣ ಕೊಟ್ಟು ಬಿಟ್ಟರೆ ಒಂದು ಸಾರಿ ವರ್ಗಾವಣೆ ಮಾಡಿದ ಮೇಲೆ ಮೂರು ವರ್ಷ ಕದಲಿಸದೆ ಇದ್ದರೆ ಶಿಕಾರಿಪುರದಲ್ಲಿರುವವನು ಸೊರಬಕ್ಕೆ ಹೋದರೆ ಇಂಪ್ರೂ ಆಗುತ್ತಾನೆನೂ? ಏನು ಸಾಧ್ಯವಿಲ್ಲ. ಅಲ್ಲೇ ಬಿಗಿ ಮಾಡೋಣ. ಅವನು ತಪ್ಪು ಮಾಡಿದರೆ. ಈ ವರ್ಗಾವಣೆಗೆ ಏನಾದರೂ ಒಂದು ಕಡಿವಾಣ ನೀವು ಹಾಕದೆ ಇದ್ದರೆ ನಾವು ಶಾಸಕರು ಕೂತುಕೊಳ್ಳುವಂತಿಲ್ಲ. ದಿವಸಕ್ಕೆ ನೂರು ಕಾಗದಗಳಿಗೆ ಸೈನ್ ಮಾಡುವುದು, ಅಭಿವೃದ್ಧಿ ಕಾರ್ಯ ಕೇಳುವುದು 10 ಪರ್ಸೆಂಟಿದ್ದರೆ 90 ಪರ್ಸೆಂಟ್ ವರ್ಗಾವಣೆಗೆ ನಿಮ್ಮ ಬಳಿ ಬರುವ ಈ ಕೆಟ್ಟ ಪದ್ದತಿ ಏನಿದೆ. ಇದನ್ನು ನಿಲ್ಲಿಸಲು ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಟಾಪ್ ಅಧಿಕಾರಿಗಳು ಪ್ರವಾಸ ಮಾಡಬೇಕು. ಮೊನ್ನೆ ನೀರಾವರಿ

ಕಾರ್ಯದರ್ಶಿಗಳನ್ನು ಕರೆದು ಕೊಂಡು ಸ್ಪಾಟ್ ಇನ್‌ಸ್ಪೆಕ್ಷನ್‌ಗೆ ಹೋದಾಗ ಆ ಬಿಗಿ ಎಲ್ಲೋ ತಪ್ಪಿ ಹೋಗಿದೆ ಎಂದು ಮೇಲ್ನೋಟಕ್ಕೆ ಕಾಣುತ್ತಿತ್ತು. ಆ ಅಧಿಕಾರಿಗಳು ನಡೆದುಕೊಂಡ ರೀತಿ ನೋಡಿದಾಗ ನಾನೇ ತಲೆತಗ್ಗಿಸಿ ಕೊಂಡು ಬಂದೆ, ಆಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಹತ್ತಿರ ಆಮೇಲೆ ಮಾತನಾಡೋಣ ಅಂತ. ಇದು ಇವತ್ತಿರುವ ದುಃಸ್ಥಿತಿ. ಯಾವುದೇ ಅಧಿಕಾರಿಗೂ ಕೆಳಗಡೆ ಮಟ್ಟದಲ್ಲಿ ಭಯ ತಪ್ಪಿ ಹೋಗಿದೆ. ಎಲ್ಲ ಇಲಾಖೆಯಲ್ಲೂ ದಯಮಾಡಿ ನಾವೆಲ್ಲ ಸಹಕಾರ ಕೊಡುತ್ತೇವೆ, ನಾವು ಹೇಳುವ ಕಂಪ್ಲೇಂಟ್ ಎಂದು ನೀವು ಪರಿಗಣಿಸಬೇಕಾಗಿಲ್ಲ. ನೀವೊಂದು ಸ್ವಲ್ಪ ಅದನ್ನು ನೋಡಿ ಇನ್‌ಸ್ಪೆಕ್ಟ್ ಮಾಡಿ ಬಿಗಿ ಕ್ರಮ ತೆಗೆದುಕೊಳ್ಳದಿದ್ದರೆ ನಮ್ಮ ಆಡಳಿತದ ವ್ಯವಸ್ಥೇ ಕೆಟ್ಟುಹೋಗುತ್ತದೆ ಬಹಳ ಕೆಟ್ಟ ಹೆಸರು ತಮಗೆ ಬರುತ್ತದೆ.

ಶ್ರೀ ಧರಂಸಿಂಗ್: ವಿರೋಧ ಪಕ್ಷದ ನಾಯಕರು ಸ್ವಲ್ಪ ಬಿಗಿ ತಪ್ಪಿಹೋಗಿದೆ ಅಂತ ಸ್ವಾಭಾವಿಕ ಹೇಳುತ್ತೀದ್ದೀರಿ. ಬಿಗಿಯೇನೋ ತಪ್ಪಿಹೋಗಿಲ್ಲ ವರ್ಗಾವಣೆಯಲ್ಲೂ ಸಣ್ಣಪುಟ್ಟದ್ದಕ್ಕೆ ಅಲ್ಲಲ್ಲಿ ವಹಿಸಿದ್ದೇವೆ. ಡಿಡಿಪಿಐನೇ ಮಾಡಬೇಕು, ನಾವು ಮಾಡುವುದಿಲ್ಲ. ಡಿಡಿಪಿ ಕಮೀಷನರ್ ಮಾಡಲಾರದೆ ಹೋದುದು ನಮ್ಮಲ್ಲಿ ಬರುತ್ತಾ ಇದೆ ಇವತ್ತು ಬಿಜಾಪುರ ಜಿಲ್ಲೆ ಡಿಡಿಪಿಐ ಪತ್ರಿಕಾ ಹೇಳಿಕೆ ಕೂಡ ನೋಡಿದೆ. ಅದು ಸರಿಯಿಲ್ಲ. ನೀವು ಹೇಳಿರುವುದು ಸ್ವಲ್ಪ ಆಗುತ್ತದೆ. ಅದನ್ನೂ ನಾವು ಬಿಗಿ ಮಾಡಲೇಬೇಕು. ಬಿಗಿ ಮಾಡದಿದ್ದರೆ ಶಾಸಕರಿಗೆ ತೊಂದರೆ ಕೊಡುತ್ತಾರೆ. ಶಾಸಕರು ನಮ್ಮ ಹತ್ತಿರ ಬರುತ್ತಾರೆ ಅಲ್ಲಿ ಕೆಳಹಂತದಲ್ಲಿ ಜಿಲ್ಲಾಧಿಕಾರಿಗಳು ಕೂಡ ಮಾಡಬೇಕು ಜಿಲ್ಲಾಧಿಕಾರಿಗಳು ನೀವು ಹೇಳಿದಂತೆ ಭೇಟಿ ನೀಡಬೇಕು ಯಾರು ಹೋಗುತ್ತ ಇಲ್ಲವೆಂಬ ಮಾತು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಮಾತನಾಡಿ ಕ್ರಮತೆಗೆದುಕೊಳ್ಳುತ್ತೇನೆ. ನೀವು ಸಲಹೆ ಕೊಟ್ಟಿದ್ದನ್ನು ನಾನು ಅಲ್ಲಗಳೆಯುವೆನು, ಸುಮ್ಮನೆ ನೀವು ರಾಜಕೀಯಕರಣಗೊಳಿಸುವಿರಿ ಎನ್ನುವ ಮುಖ್ಯಮಂತ್ರಿ ನಾನಲ್ಲ. ಇವತ್ತು ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುವೆನು.

ಶ್ರೀ ಜೆ.ಸಿ.ಮಾಧುಸ್ವಾಮಿ: ರದ್ದು ಮಾಡಬೇಕೆನ್ನುವ ಬಹಳ ಹುದ್ದೆಗಳನ್ನು ತೀರ ಅಗತ್ಯವಾದ ಇಲಾಖೆಗಳಲ್ಲೇ ಮಾಡಿದ್ದೀರಿ. ನಾವು ಇಲ್ಲಿ ಬೊಬ್ಬೆ ಹೊಡೆಯುತ್ತಿದ್ದೇವೆ

ಪಶುಸಂಗೋಪನೆ ಇಲಾಖೆಯಲ್ಲಿ ಕೆಲಸ ಮಾಡುವವರೇ ಇಲ್ಲ ಅಂತ ಅಲ್ಲಿ 825 ಮಂದಿ ತೆಗೆಯಬೇಕು ಅಂತ ಮಾಡುತ್ತೀರಿ, ಖರ್ಗೆಯವರ ಭಾರೀ ನೀರಾವರಿಯಲ್ಲಿ 1890 ಮಂದಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ 1200 ಮಂದಿ ತೆಗೆಯಬೇಕೆಂದಿದ್ದೀರಿ. ಒಂದು ಕಡೆ ಅಲ್ಲಿ ಕೆಲಸ ಮಾಡುವವರಿಲ್ಲ ಅನ್ನುತ್ತೇವೆ. ಒಂದು ಕಡೆ ಇಲ್ಲಿ ರದ್ದು ಮಾಡುತ್ತೇವೆ. ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸು ಒಪ್ಪಿಕೊಂಡಿದ್ದೇವೆ ಎನ್ನುತ್ತೀರಿ, ಆಡಳಿತ ಹೇಗಾಗಿದೆ? ಕೃಷಿ ಇಲಾಖೆ ಕೆಲಸ ಮಾಡುವವವರನ್ನು ನಾವು ಹುಡುಕುತ್ತಿದ್ದೇವೆ, ಎ.ಇ.ಓ.ಗಳಿಲ್ಲ ಬೀಗ ಹಾಕಿರುವ ಸ್ಥಿತಿಗೆ ಇಲಾಖೆಗಳು ಒಂದು ಕೃಷಿ ಇಲಾಖೆಯಲ್ಲಿ ರದ್ದು ಮಾಡುತ್ತೇವೆ ಎನ್ನುವಿರಿ ಆದರೆ ಇನ್ನೊಂದು ಕಡೆ ಅಸಿಸ್ಟೆಂಟ್ ಕಮೀಶನರ್ ಹುದ್ದೆನ ಸನ್ಮಾನ್ಯ ಬಂಗಾರಪ್ಪನವರು ಇಲ್ಲಿ ಭಾಷಣ ಮಾಡಿ ಹೋಗಿದ್ದರು ತಹಶೀಲ್ದಾರನ್ನು ಕ್ಲಾಸ್–1 ಮಾಡಿ, ಎಸಿಗಳನ್ನು ಸಬ್ ಡಿವಿಜನ್ ಕಾನ್‌ಸೆಪ್ಟನ್ನು ರದ್ದು ಮಾಡುತ್ತೇವೆ ಅಂತ. ಆದರೆ ಆ ಸಬ್‌ಡಿವಿಜನ್ ಕಾನ್‌ಸೆಪ್ಟನ್ನು ಮತ್ತೆ ಯಾಕಿಟ್ಟು ಕೊಂಡಿದ್ದೀರಿ ಅಂತ ನಮಗೆ ಗೊತ್ತಿಲ್ಲ. ಅದೊಂದು ಚೆಕ್‌ಪೋಸ್ಟ್ ನಿಂತಿದೆ, ನಾಡಕಚೇರಿಗಳು ಇಟ್ಟು ಕೊಂಡಿದ್ದೀರಿ ಅಲ್ಲೇನೂ ಕೆಲಸ ನಡೆಯುತ್ತಿಲ್ಲ. ಎಲ್ಲಾ ತಾಲೂಕು ಆಫೀಸಿಗೆ ಬರಬೇಕು, ನೀವು ಕಂಪ್ಯೂಟರ್ ಇಟ್ಟ ಮೇಲಂತೂ ನಾಡಕಚೇರಿಯಲ್ಲಿ ಪಹಣಿಯನ್ನು ತೊಗೋಳೋಕೆ ಆಗುತ್ತಿಲ್ಲ ಅಧ್ಯಕ್ಷರೆ. ಆ ಹುದ್ದೆಗಳನ್ನು ಯಾಕೆ ಇಟ್ಟಿದ್ದೀರಿ. ಇವತ್ತು ನಮಗೆ ಶಿರಸ್ತೇದಾರರು ಸಿಕ್ತಾನೇ ಇಲ್ಲ. ನನ್ನ ತಾಲೂಕಿನಲ್ಲಿ ಎರಡೋ ಮೂರೋ ಖಾಲಿ ಇವೆ. ಯಾವುದೇ ಡಿಸಿ ಕೇಳಿ, ಶಿರಸ್ತೇದಾರರ ಗ್ರೇಡ್ ಆಫೀಸರ್ ಇಲ್ಲ ಅನ್ನುತ್ತಾರೆ. ಇದಕ್ಕೇನಾದರೂ ಒಂದು ನಿರ್ಣಯವನ್ನು ತಾವು ತೆಗೆದುಕೊಳ್ಳದಿದ್ದರೆ ಆಡಳಿತ ಸುಧಾರಣೆ ಹೇಗೆ ಆಗುತ್ತದೆ ಸಾರ್? ಶೇಕಡಾವಾರು ಸಿಗುವುದಿಲ್ಲ. ಶಿರಸ್ತೇದಾರರು ಸಿಗುವುದಿಲ್ಲ. ಸುಮಾರು 40 ಪರ್ಸೆಂಟ್ ತಹಶೀಲ್ದಾರ್ ಹುದ್ದೆಗಳು ಖಾಲಿ ಇದ್ದಾವೆ. ನೀವು 175 ಸಬ್ ಡಿವಿಜನ್‌ಗಳನ್ನು ಇಟ್ಟುಕೊಂಡು 400 ಜನರನ್ನು ಅಸಿಸ್ಟೆಂಟ್ ಕಮೀಷನರ್ ಮಾಡುತ್ತೀರಿ. ಐದೈದು ವರ್ಷಕ್ಕೆ ಸಬ್‌ಇನ್ಸ್ ಪೆಕ್ಟರ್‌ಗಳನ್ನು ಪ್ರಮೋಟ್ ಮಾಡಿ ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನಾಗಿ ಮಾಡಿ ಸಬ್ ಇನ್ಸ್‌ಪೆಕ್ಟರ್ ಇಲ್ಲದ ಹಾಗೆ ಮಾಡಿದ್ದೀರಿ. ಅದೆಲ್ಲಾ ಸುಧಾರಣೆಯಲ್ಲಿ ಹೇಗೆ ಮಾಡಬೇಕು ಎಂದು ನೀವು ಹೇಳಬೇಕು ಸಾರ್.

ಉಪಾಧ್ಯಕ್ಷರು: ವಾಟಾಳ್ ನಾಗರಾಜ್‌ರವರೇ ಕೇಳಿ. ಇನ್ನು ಐದು ಪ್ರಶ್ನೆಗಳಿವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ಸುಧಾರಣೆ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಒಂದು ಫೈಲ್ ಒಂದು ಆಫೀಸ್‌ಗೆ ಹೋದರೆ ಎಷ್ಟು ಟೇಬಲ್ ರೌಂಡ್ ಆಗಬೇಕು ಎನ್ನತಕ್ಕಂತದ್ದು ಇವತ್ತಿಗೂ ಅದು ಮುಕ್ತಾಯವಾಗಿಲ್ಲ. ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕು, ಮತ್ತು ಅದು ಜನಸಾಮಾನ್ಯರಿಗೆ ಸಿಗಬೇಕು, ಕೆಲಸಗಳು ಸ್ಟ್ರೀಮ್‌ಲೈನ್ ಆಗಬೇಕು ಎಂದು ಹೇಳಿ ಸುಮಾರು ಸಲ ಈ ಸದನದಲ್ಲಿ ಹೇಳಿದೆ. ಆದರೆ ಯಾವುದಾದರೂ ಒಂದುಪತ್ರ, ಯಾವುದಾದರೂ ಒಂದು ಫೈಲ್ ಕಚೇರಿಗೆ ಹೋದರೆ ಎಷ್ಟು ಟೇಬಲ್‌ಗಳು ಸುತ್ತಿ ಎಷ್ಟು ಸೈನ್‌ಗಳಾಗಿ ಲೀಸ್ಟ್ ಆಗಿ ಬರುವುದು, ಇದರ ಸಮಯವೆಷ್ಟು ಇದರ ಪರಿಸ್ಥಿತಿಗಳೇನು ಎಂದು ಇವತ್ತಿಗೂ ಅದರಲ್ಲಿ ಸುಧಾರಣೆ ಬಂದಿಲ್ಲ. ಇದನ್ನು ಮುಖ್ಯಮಂತ್ರಿಗಳು ದಯವಿಟ್ಟು ಗಮನಿಸಬೇಕು, ಏಕೆಂದರೆ, ನಾವು ಇದನ್ನು ನಮ್ಮ ಸ್ವಂತ ಅನುಭವದಲ್ಲಿ ಹೇಳುತ್ತಿದ್ದೇವೆ. ಒಂದು ತಿಂಗಳಾದರೂ ಒಂದು ಫೈಲ್ ಒಂದೇ ಆಫೀಸ್‌ನಲ್ಲಿ ಕುಳಿತುಕೊಂಡಿರುತ್ತದೆ. ಮತ್ತೆ ಇನ್ನೊಂದು ಮಾನ್ಯ ಮುಖ್ಯಮಂತ್ರಿಗಳ ಸ್ಥಾನ ಏನಿದೆ, ಅದು ಬಹಳ ಪವಿತ್ರವಾದ ಸ್ಥಾನ ಮತ್ತು ಶಕ್ತಿಯುತವಾದ ಸ್ಥಾನ. ಅವರು ಯಾರಿಗಾದರೂ ಒಂದು ಆಶ್ವಾಸನೆಯನ್ನು ಕೊಟ್ಟರೆ, ಎಲ್ಲಿಯಾದರೂ ಒಂದು ಹೇಳಿಕೆಯನ್ನು ಕೊಟ್ಟರೆ ಅದು ಸಾಮಾನ್ಯ ಜನರಿಗೆ ಆಗಬಹುದು, ಸದನದಲ್ಲಿ ಆಗಬಹುದು ಅಥವಾ ಶಾಸಕರಿಗೆ ಆಗಬಹುದು. ಅವರೊಂದು ಹೇಳಿಕೆಯನ್ನು ಕೊಟ್ಟಾಗ ಅವರು ಯಾರಿಗಾದರೂ ಆಶ್ವಾಸನೆಗಳನ್ನು ಕೊಟ್ಟಾಗ ಅದು ಜನರ ಭಾವನೆ ಏನೆಂದರೆ ಅದೊಂದು ಕಾನೂನು ಎಂದು. ಮುಖ್ಯಮಂತ್ರಿಗಳು ಏನೇ ಮಾತನಾಡಿದರೂ ಅದೊಂದು ಕಾನೂನು. ಅದನ್ನು ಜಾರಿಗೊಳಿಸಬೇಕಾಗಿರತಕ್ಕಂಥ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಅದನ್ನು ಗಮನದಲ್ಲಿಡಬೇಕೆನ್ನುವಂಥದ್ದು ಒಂದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಾವು ಕಡಿತಗೊಳಿಸುತ್ತಿರುವ ತೀರ್ಮಾನಿಸಿರುವ ಹುದ್ದೆಗಳ ಸಂಖ್ಯೆ ಎಂದು ಹೇಳಿದ್ದೀರಿ. 20142. ಇದನ್ನು ಯಾವಾಗ ನೀವು ಕಡಿತಗೊಳಿಸುವುದು? ಇದನ್ನು ಯಾವ ಆಧಾರದ ಮೇಲೆ ನೀವು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ? ಹಾರ್ನಳ್ಳಿ ರಾಮಸ್ವಾಮಿಯವರ ವರದಿ ಆಧಾರವೇ? ಅಥವಾ ಬೇರೆ ಯಾರ್ಯಾರು ವರದಿಗಳನ್ನು ಕೊಟಿದ್ದಾರೆ? ಇದು ಎಷ್ಟು ಹುದ್ದೆಗಳನ್ನು ಕಡಿತಗೊಳಿಸುವುದು ಯಾವಾಗ? ಇದು ನಿಜವಾಗಿಯೂ

ಪ್ರಾಮಾಣಿಕವಾಗಿ ಅನೇಕ ಇಲಾಖೆಗಳಿಗೆ ಹುದ್ದೆಗಳು ಬೇಕು ಎಂದು ಹೇಳುತ್ತಾರೆ. ಕೆಲವು ಇಲಾಖೆಗಳಲ್ಲಿ ಜಾಸ್ತಿ ಇದೆ. ಇಲ್ಲಿ ನೋಡಿದರೆ ಕೆಲವು ಇಲಾಖೆಗಳಿಗೆ ನೀವು ತೆಗೆಯುತ್ತಿರುವುದು ಸರಿಯಾದ ಕ್ರಮವಲ್ಲ. ಹಾರ್ನಳ್ಳಿ ರಾಮಸ್ವಾಮಿಯವರ ವರದಿ ನೂರಕ್ಕೆ ನೂರು ಸರಿ ಎಂದು ಹೇಳಿ ನಾವೇನು ಒಪ್ಪಿಕೊಳ್ಳತಕ್ಕಂಥದಲ್ಲ. ಕೆಲವುಗಳನ್ನು ನಾವು ಒಪ್ಪಿಕೊಳ್ಳಬಹುದು. ಆದರೆ ಕೊಟ್ಟಿರುವ ಹುದ್ದೆಗಳಲ್ಲಿ ಕೆಲವು ಇಲಾಖೆಗಳಿಗೆ ಹುದ್ದೆಗಳು ಬೇಕೆ ಬೇಕಾಗುತ್ತದೆ. ಆದರೆ ನೀವು ಪಟ್ಟಿ ಮಾಡಿರುವುದನ್ನು ನೋಡಿದರೆ ಈ ಇಲಾಖೆಗಳನ್ನು ಮುಚ್ಚತಕ್ಕ ವ್ಯವಸ್ಥೆ ಬರುತ್ತದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡಿ ಮತ್ತೊಮ್ಮೆ ಪರಿಶೀಲನೆ ಮಾಡಿ ಯಾವ ಯಾವ ಇಲಾಖೆಯಲ್ಲಿ ಹುದ್ದೆಗಳನ್ನು ಜಾಸ್ತಿ ತೆಗೆಯಬೇಕೆಂದು ಹೇಳಿ ಹೇಗೆ ತೀರ್ಮಾನವನ್ನು ಮಾಡಿದ್ದೀರಿ ಎಂದು ಹೇಳಿ.

ಶ್ರೀ ಎನ್.ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)– ಮಾನ್ಯ ಉಪಾಧ್ಯಕ್ಷರೆ ವಾಟಾಳ್ ನಾಗರಾಜ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ. ಬಹಳ ದೊಡ್ಡ ಪ್ರಶ್ನೆ ಇದೆ. ಇದಕ್ಕೆ ನನ್ನ ಉತ್ತರ ಬಹಳಷ್ಟು ಪೇಜ್‌ನಲ್ಲಿದೆ. ಅದನ್ನು ನಾನು ಟೇಬಲ್ ಮಾಡಿದ್ದೇನೆ. ಅದನ್ನು ತಾವು ತರಿಸಿ ನೋಡಬಹುದು. ಒಂದು ಏನೆಂದರೆ ಹಾರ್ನಳ್ಳಿ ರಾಮಸ್ವಾಮಿ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಮುಖ್ಯವಾಗಿ ಏನೆಂದರೆ ಆಗ ಎಂ.ವೈ.ಘೋರ್ಪಡೆಯವರ ಅಧ್ಯಕ್ಷತೆಯಲ್ಲಿ ಕಮಿಟಿಯನ್ನು ಮಾಡಿದ್ದರು. ತದನಂತರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯನ್ನು ಕಮಿಟಿ ಮಾಡಿದ್ದೇವೆ. ಇವತ್ತು ಡಿವಿಜನಲ್ ಕಮಿಷನರ್ ಹುದ್ದೆಗಳನ್ನು ಅಬಾಲಿಷ್ ಮಾಡಬೇಕೆಂದು ತೆಗೆದುಕೊಂಡಿದ್ದೇವೆ. ಮತ್ತು ಎಲ್ಲೆಲ್ಲಿ ಎಕ್ಸಸ್ ಇದೆ, ಅದಕ್ಕೂ ಕೂಡ ಕ್ರಮವನ್ನು ತೆಗೆದುಕೊಂಡಿದ್ದೇವೆ. ಕ್ರಮ ತೆಗೆದುಕೊಂಡು ಅದರ ಬಗ್ಗೆ ಮಾಡುತ್ತಿದ್ದೇನೆ ಮತ್ತು ಅದಕ್ಕೆ ಡೀಟೈಲ್ ಆಗಿ ವಿವರವನ್ನು ಉತ್ತರದಲ್ಲಿ ಕೂಡ ಒದಗಿಸಿದ್ದೇನೆ. ಇನ್ನೂ ಕೂಡ ಇದರ ಬಗ್ಗೆ ಇಲಾಖೆಯ ಬಗ್ಗೆ ಚರ್ಚೆ ನಡೆಯುತ್ತದೆ. ಚರ್ಚೆಯಲ್ಲಿ ಭಾಗವಹಿಸತಕ್ಕ ಕಾಲದಲ್ಲಿ ಸಾಕಷ್ಟು ಅವಕಾಶ ಇದೆ. ನಾನು ಅದಕ್ಕೆ ದೀರ್ಘವಾದ ಉತ್ತರವನ್ನು ಕೂಡ ಕೊಡುತ್ತೇನೆ. ಇವತ್ತು ನಮ್ಮ ಶ್ರೀರಾಮರೆಡ್ಡಿಯವರು ಕೇಳಿದರು, ಮುಖ್ಯಮಂತ್ರಿಗಳ ಹೇಳಿಕೆ ಬಗ್ಗೆ, ರಾಜ್ಯದಲ್ಲಿ ನಾನು ಮುಖ್ಯಮಂತ್ರಿ ಯಾವುದರಲ್ಲಿ ನಾವು ತಪ್ಪಿದ್ದೇವೆ, ಎಲ್ಲಿ ಪಾಲನೆ ಮಾಡಿದ್ದೇವೆ ಎಂದು ನಮ್ಮ

ಗಮನಕ್ಕೆ ತನ್ನಿ. ಇವತ್ತು ನಾವು ಆದೇಶ ಕೊಟ್ಟ ಮೇಲೆ ಕೆಲವು ಆರ್ಥಿಕ ತೊಂದರೆ ಇರಬಹುದು. ಬೇರೆ ತೊಂದರೆ ಇರಬಹುದು. ವರ್ಗಾವಣೆಯಲ್ಲಿ ನೀವು ಹೇಳಿರಬಹುದು. ಮತ್ತೊಬ್ಬರು ಹೇಳಿರಬಹುದು. ಅದು ಬೇರೆ ಇವತ್ತು ನಿಮ್ಮ ಜಿಲ್ಲೆಗೆ ಮತ್ತು ರಾಜ್ಯಕ್ಕೆ ಸಂಬಂಧಪಟ್ಟಂತೆ ಏನಾದರೂ ಕೂಡ ನನ್ನ ಮುಂದೆ ಇಟ್ಟರೆ ಯಾರಾದರೂ ಅಧಿಕಾರಿಗಳು ಅದನ್ನು ಪಾಲನೆ ಮಾಡದೇ ಹೋದರೆ ನಾನು ನಿಮಗೆ ಸದನದಲ್ಲಿ ಹೇಳುತ್ತಿದ್ದೇನೆ. ಇವತ್ತು ಅದರ ಬಗ್ಗೆ ಉಗ್ರವಾದ ಕ್ರಮವನ್ನು ನಾನು ತೆಗೆದು ಕೊಳ್ಳುತ್ತೇನೆ. ಅದರ ಬಗ್ಗೆ ನಾವು ಯೀಲ್ಡ್ ಆಗತಕ್ಕದ್ದು ಇಲ್ಲ. ಇವತ್ತು ಪ್ರಜಾಪ್ರಭುತ್ವದಲ್ಲಿ ಮುಖ್ಯಮಂತ್ರಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ತಾವು ಶಾಸಕರೇನು ಕೇಳುತ್ತೀರಿ, ಸದನದಲ್ಲಿ ಆಗದೇ ಹೊರಗಡೆ ಕೇಳಿದಾಗ ನಾವು ಅದಕ್ಕೆ ಆದೇಶವನ್ನು ಕೊಡುತ್ತೇವೆ. ಪರಿಪಾಲನೆ ಮಾಡತಕ್ಕ ರೀತಿಯಲ್ಲಿ ಒಂದೆರಡು ದಿವಸ ಸ್ವಲ್ಪ ತಡವಾಗಬಹುದು. ಆದರೆ ಇಂಪ್ಲಿಮೆಂಟ್ ಮಾಡತಕ್ಕ ರೀತಿಯಲ್ಲಿ ಏನಾದರೂ ತೊಂದರೆಯಾದರೆ ಅದನ್ನು ನಾನು ಸಹನೆ ಮಾಡುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಈಗಾಗಲೇ ಮಾಧುಸ್ವಾಮಿಯವರು ಹೇಳಿದ್ದಾರೆ. ಇವತ್ತು ನೀವೆಷ್ಟು ಹುದ್ದೆಗಳನ್ನು ಅನಾವಶ್ಯಕವಾಗಿ ಮಾಡಿದ್ದೀರಿ ಎಂದು. ನಾನು ಹೇಳುತ್ತೇನೆ, ಮಾಧುಸ್ವಾಮಿಯವರೇ ನಾನು ಡೀಟೇಲ್ ಆಗಿ ಉತ್ತರವನ್ನು ಕೊಟ್ಟಿದ್ದೇನೆ. ಇನ್ನೂ ಕೂಡ ತಾವು ಡಿಮ್ಯಾಂಡ್‌ನಲ್ಲಿ ಪ್ರಸ್ತಾಪ ಮಾಡಿದಾಗ ಅದಕ್ಕೆ ಸಮರ್ಪಕವಾದ ಉತ್ತರ ಕೊಡುತ್ತೇನೆ. ಏಕೆಂದರೆ, ಇದು ಬಹಳ ದೊಡ್ಡ ಪ್ರಶ್ನೆ ಇದೆ. ಇದರ ಬಗ್ಗೆ ಒಂದು-ಎರಡು ತಾಸು ಚರ್ಚೆಯಾಗಬೇಕಾಗಿತ್ತು. ಇದು ಕೇವಲ ಪ್ರಶ್ನೆ, ಉಪಪ್ರಶ್ನೆಗಳ ಮುಖಾಂತರ ನಿಮಗೆ ಸಮಾಧಾನ ಮಾಡುವುದಿಲ್ಲ. ಇವತ್ತು ಆಡಳಿತ ಸುಧಾರಣೆ ಹನುಮಂತಯ್ಯನವರು ಕೂಡ ಅವರೊಂದು ಸಮಿತಿಯ ವರದಿಯನ್ನು ಕೊಟಿದ್ದಾರೆ. ತದನಂತರ ರಾಮಸ್ವಾಮಿಯವರೂ ಕೂಡ ಕೊಟ್ಟಿದ್ದಾರೆ. ಎಲ್ಲಿಯವರೆಗೆ ಇಂಪ್ಲಿಮೆಂಟ್ ಮಾಡಿದ್ದೇವೆ, ಎಲ್ಲಿಯವರೆಗೆ ಕಾರ್ಯಗತ ಮಾಡಿ ಜನರಿಗೆ ಅದರಿಂದ ಲಾಭವಾಗಿದೆ, ಲಾಭವಾಗಿಲ್ಲ. ಅದೆಲ್ಲದರ ಬಗ್ಗೆ ಚರ್ಚೆಯನ್ನು ಮಾಡೋಣ. ಅದರ ಬಗ್ಗೆ ಮತ್ತೊಂದು ಸಮಯಾವಕಾಶವನ್ನು ಕಲ್ಪಿಸಿಕೊಡಿ. ಅವತ್ತೂ ಕೂಡ ಇದೇ ರೀತಿ ದೀರ್ಘವಾದ ಉತ್ತರವನ್ನು ಕೊಡುತ್ತೇನೆ.